**ಉರ್ದೂ ಬಗ್ಗೆ ಏಕೆ ಈ ಮೋಹ?**

ಪ್ರತಿ ಶುಕ್ರವಾರ ಸಂಜೆ ೫-೩೦ ಕ್ಕೆ ಬೆಂಗಳೂರು ದೂರದರ್ಶನದಿಂದ ೩೦ ನಿಮಿಷಗಳ ಕಾಲ ಉರ್ದೂ ಕಾರ್ಯಕ್ರಮವೊಂದು ಪ್ರಸಾರವಾಗುತ್ತದೆ. ಆದರೆ ಉರ್ದು ಸಂವಿಧಾನದಲ್ಲಿ ನಮೂದಿಸಲಾಗಿರುವ ೧೫ ಭಾಷೆಗಳಲ್ಲಿ ಒಂದಾಗಿದ್ದರೂ ಅದು ಯಾವುದೇ ಪ್ರಾಂತ್ಯದ ಅಥವಾ ರಾಜ್ಯದ ಅಧಿಕೃತ ಭಾಷೆಯಾಗಿಲ್ಲ. ತಮಿಳು, ತೆಳುಗು, ಮಲಯಾಳಂ, ಮರಾಠಿ ಮುಂತಾದ ಭಾಷಿಗರು ಹೆಚ್ಚಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಹೀಗಿದ್ದರೂ ಈ ಎಲ್ಲಾ ಭಾಷೆಗಳ ಸ್ನೇಹಭಾರತಿ ಕಾರ್ಯಕ್ರಮ ದೂರದರ್ಶನದಲ್ಲಿ ೧೫ ದಿನಗಳಿಗೊಮ್ಮೆ ಸರದಿಯಂತೆ ಪ್ರಸಾರವಾಗುತ್ತಿದೆ. ಆದರೂ ಉರ್ದೂವಿನ ಬಗ್ಗೆ ಈ ಮೋಹ ಏತಕ್ಕೆ? ಭಾರತದ ಎಲ್ಲ ಭಾಷೆಗಳಿಗೂ ಮೂಲವಾದ ಸಂಸ್ಕೃತವನ್ನು ಇತ್ತೀಚಿನವರೆಗೂ ಸಂಪೂರ್ಣವಾಗಿ ದೂರದರ್ಶನದಲ್ಲಿ ನಿರ್ಲಕ್ಷಿಸಲಾಗಿತ್ತು. ಆದರೆ ಈಗ ಕೆಲವು ತಿಂಗಳುಗಳಿಂದ ಪ್ರತಿ ವಾರವೂ 'ಸಂಸ್ಕೃತ ಸೌರಭ' ಕಾರ್ಯಕ್ರಮ ಪ್ರಸಾರವಾಗುತ್ತಿದೆ. ಆದರೆ ಕೇವಲ ೧೫ ನಿಮಿಷಗಳು ಮಾತ್ರ. ಈ ಧೋರಣೆ ಸರಿಯೇ? ಉರ್ದೂ ಭಾಷೆ ಸಂಸ್ಕೃತ ಭಾಷೆಗಿಂತಲೂ ನಮಗೆ ಆಧರಣೀಯವೇ? ಉರ್ದೂ ಭಾಷೆಗೆ ಪ್ರತಿವಾರ ೩೦ ನಿಮಿಷಗಳ ಅವಧಿ ಅಗತ್ಯವೇ ?

ಈ ವಿಷಯಗಳ ಬಗ್ಗೆ ದೂರದರ್ಶನದವರು ಉತ್ತರ ನೀಡಬೇಕು. ಇಷ್ಟು ಸಾಲದೆಂಬಂತೆ ಈಗ ಸರ್ಕಾರ ಆಯ್ದ ದೂರದರ್ಶನ ಕೇಂದ್ರಗಳಿಂದ ಉರ್ದು ವಾರ್ತಾ ಪ್ರಸಾರಕ್ಕೆ ಒಪ್ಪಿದೆ. ಉರ್ದು ವಾರ್ತೆಗಳ ಬಗ್ಗೆ ಜನತಾದಳದ ಸದಸ್ಯರು ಆಗ್ರಹ ಪಡಿಸಿದ ಕೂಡಲೇ ಕಾಂಗ್ರೆಸ್ ಸರ್ಕಾರ ಒಪ್ಪಿಕೊಂಡಿದ್ದು, ಈ ಎರಡು ಗುಂಪುಗಳು ಮುಸ್ಲಿಂ ಓಟಿನ ಮೇಲೆ ಕಣ್ಣಿಟ್ಟಿರುವುದು ಸ್ಪಷ್ಟವಾಗಿದೆ. ಇನ್ನಾದರೂ ಉರ್ದು ಭಾಷೆಯನ್ನು ಇತರ ಭಾಷೆಗಳಂತೆ ಪರಿಗಣಿಸಬೇಕು. ವಾರದ ಅರ್ಧ ಗಂಟೆಯ ಕಾರ್ಯಕ್ರಮ ಕೂಡಲೇ ನಿಲ್ಲಿಸಬೇಕು ಮತ್ತು ಸಂಸ್ಕೃತ ಭಾಷೆಗೆ ಸೂಕ್ತ ಮನ್ನಣೆ ಕೊಟ್ಟು, ಬೆಂಗಳೂರು ದೂರದರ್ಶನದಲ್ಲಿ ಕನಿಷ್ಟ ೪೫ ನಿಮಿಷಗಳ ಕಾರ್ಯಕ್ರಮ ಪ್ರಸಾರ ಮಾಡಬೇಕು.

Sept 29th 1991 Vikram Urdu bagge Eke ie Moha